

## ಅದಿತಿ ಮಿತ್ತಲ್

ದೇಶದ ಮೊದಲ ಮಹಿಳಾ ಸ್ಟ್ಯಾಂಡ್ ಅಪ್ ಕಾಮಿಡಿಯನ್ ಎಂಬ ಅಗ್ಗಳಿಕೆ ಅದಿತಿ ಮಿತ್ತಲ್ ಅವರದ್ದು. ನಟಿ, ಬರಹಗಾರ್ತಿ ಕೂಡ. 'ಟೈಮ್ಸ್ ಆಫ್ ಇಂಡಿಯಾ ಟಾಪ್ 10' ಸ್ಟಾಂಡ್ ಅಪ್ ಕಾಮಿಡಿಯನ್ ಪಟ್ಟಿಯಲ್ಲಿ ಈಕೆಯೂ ಇದ್ದಾಳೆ. CNNIBN.com ಈಕೆಯನ್ನು ಹಾಸ್ಯ, ಜಾಣ್ಮೆ, ಹರಿತ ಟ್ವೀಟ್‌ಗಾಗಿ ಫಾಲೊ ಮಾಡಬಹುದಾದ 30 ಮಹಿಳೆಯರ ಲಿಸ್ಟ್‌ನಲ್ಲಿ ಸೇರಿಸಿದೆ. 'ಜೈ ಹಿಂದ್' ರಾಜಕೀಯ ವಿಡಂಬನಾ ಶೋದಲ್ಲಿ ಅದಿತಿ ಮುಖ್ಯಪಾತ್ರ ನಿರ್ವಹಿಸಿದ್ದರು. ಅವರ ಧ್ವನಿಯಲ್ಲೇ ಒಂದು ವಿಶೇಷ ಎನರ್ಜಿ ಇದೆ.

ಅಮೆರಿಕದ ಕಾಮಿಡಿಯನ್, ನಟಿ, ನಿರ್ಮಾಪಕಿಯರಾದ ಟಿನಾ ಫೆ ಮತ್ತು ಕ್ರಿಸ್ಟಿನ್ ವಿಗ್‌ರಿಂದ ಪ್ರೇರೇಪಿತರಾಗಿ ನ್ಯೂಯಾರ್ಕ್‌ನಲ್ಲಿರುವ ಉದ್ಯೋಗವನ್ನು ಬಿಟ್ಟು ಸ್ಟಾಂಡ್ ಅಪ್ ಕಾಮಿಡಿಯನ್ ಆಗಬೇಕು ಎಂದು ಭಾರತಕ್ಕೆ ಬಂದ ಅದಿತಿ ಮಿತ್ತಲ್, 'ಬ್ಯಾಡ್ ಗರ್ಲ್' ಎಂಬ ಯೂಟ್ಯೂಬ್ ಸೀರೀಸ್ ಮಾಡಿದ್ದಾರೆ.

**youtu.be/6w85qW_cjFA**
**youtu.be/Q9m5sZ_PG8k**

## ನಿಧಿ ಗೋಯಲ್

ನಿಧಿ ಗೋಯಲ್ ಭಾರತದ ಮೊದಲ ಮಹಿಳಾ ಅಂಗವಿಕಲ ಸ್ಟಾಂಡ್ ಅಪ್ ಕಾಮಿಡಿಯನ್. ಈಕೆ ಲಿಂಗಾಧಾರಿತ ಹಕ್ಕಿನ ಹೋರಾಟಗಾರಳು, ವಕೀಲೆ, ಯು.ಎನ್. ಮಹಿಳಾ ಕಾರ್ಯನಿರ್ವಾಹಕ ನಿರ್ದೇಶಕರ ಸಲಹಾ ಮಂಡಳಿಗೆ ನೇಮಕಗೊಂಡ ಭಾರತೀಯ ಮಹಿಳೆ. ಸಮೂಹಮಾಧ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಮುಂಬೈನ 'ರೈಸಿಂಗ್ ಫ್ಲೇಮ್' ಎನ್.ಜಿ.ಓ.ದ ಸ್ಥಾಪಕಿಯೂ ಹೌದು. ಹೀಗೆ ಹಲವು ಕವಲುಗಳ ನಿಧಿಯ ವ್ಯಕ್ತಿತ್ವದಲ್ಲಿ ಅಡಗಿದ್ದ ಹಾಸ್ಯಪ್ರಜ್ಞೆಯ ಸುಪ್ತಪ್ರತಿಭೆ ಹೊರಬಂದಿದ್ದು ಆನ್‌ಲೈನ್ ಪ್ಲಾಟ್‌ಫಾರಂ ಮೂಲಕ.

ನಿಧಿಗೆ 'ರೆಟಿನಿಟಿಸ್ ಪಿಗ್ಮೆಮಟೋಸಾ' ಎಂಬ ಕಣ್ಣಿನ ಕಾಯಿಲೆ ಇರುವುದು 15ನೇ ವಯಸ್ಸಿನಲ್ಲಿ ಪತ್ತೆಯಾಯಿತು. ಆ ಸಮಸ್ಯೆ ಗುಣವಾಗದ ಕಾರಣ ನಿಧಿ ತನ್ನ 16ನೇ ವಯಸ್ಸಿನಲ್ಲಿ ಕಣ್ಣು ಕಳೆದುಕೊಂಡಳು. ಹೊರಗಣ್ಣು ಮುಚ್ಚಿದಂತೆ ಒಳಗಣ್ಣು ತೆರೆದುಕೊಂಡಿತು. ಅಂತರಂಗ ಸೂಕ್ಷ್ಮವಾದಾಗ – ಅಂಗವಿಲಕರ ಸಮಸ್ಯೆಗಳು, ಅವರ ಸಾಂಸಾರಿಕ ಸಮಸ್ಯೆಗಳು, ರಿಲೇಷನ್‌ಶಿಪ್, ಲವ್, ಸಮಾಜ ಅವರನ್ನು ನೋಡುವ ರೀತಿ... ಇದೆಲ್ಲವನ್ನೂ ಹಾಸ್ಯದಿಂದಲೇ ಬಿಂಬಿಸುತ್ತ ನಮ್ಮ ಅಸೂಕ್ಷ್ಮತೆಯನ್ನು ನಿಧಿ ಎತ್ತಿ ತೋರಿಸುತ್ತಾರೆ.

'ಅಂಗವಿಕಲರಿಗೆಲ್ಲ 6th ಸೆನ್ಸ್ ಇರತ್ತಲ್ವಾ?' ಎಂದು ಕೇಳಿದರೆ – 'ನಾನೇನು ನಿಧೀನಾ, ನಿಧಿ ಸ್ವಾಮಿಣಿಯಾ?' ಎಂದು ನಗುವಷ್ಟು ಅವರ ಹಾಸ್ಯಪ್ರಜ್ಞೆ ಹರಿತವಾಗಿದೆ.

'ನೀನು ಅಂಗವಿಕಲೆ, ಮೇಲಾಗಿ ಹೆಣ್ಣು. ನಿನ್ನ ಮಾತಿನ ವಿಷಯವೂ ಅವೇ ಆಗಿರಬೇಕೇ ಹೊರತು ಲವ್, ಸೆಕ್ಸ್ ಬಗ್ಗೆಯೆಲ್ಲ ಮಾತಾಡ್ತೀಯಲ್ಲಾ?' ಎಂಬ ಪ್ರಶ್ನೆಗಳು 'ಸಭ್ಯ ಸಮಾಜ'ದಿಂದ ಅವರಿಗೆ ಎದುರಾಗುತ್ತಲೇ ಇರುತ್ತವೆ. 'ಈ ಪ್ರಶ್ನೆಗಳೇ ಅಸಂಬದ್ಧ. ನಾನು ಮಹಿಳಾ ಹಕ್ಕುಗಳ ಹೋರಾಟಕ್ಕೆ ರಿಸರ್ಚ್ ಮಾಡುವುದರಿಂದ ಡೇಟಾ ಸಿಗುತ್ತದೆ. ನನ್ನ ಅನುಭವ, ನನ್ನ ಕ್ಲೈಂಟ್‌ಗಳ ಅನುಭವಗಳೇ ನನ್ನ ಕಾಮಿಡಿಗೆ ವಿಷಯ ಒದಗಿಸುತ್ತವೆ. ಕಾಮಿಡಿ ನನ್ನ ಚಳವಳಿಯ ಭಾಗ' ಎಂಬುದು ಅವರ ಸ್ಪಷ್ಟ ಉತ್ತರ.

'ಅಡುಗೆ ಮಾಡೋದು, ಬಟ್ಟೆ ತೊಳಿಯೋದು, ಮಕ್ಕಳನ್ನ ನೋಡಿಕೊಳ್ಳೋದು, ಗಂಡ ಆರಾಮಾಗಿ ಇರುವಂತೆ ನೋಡಿಕೊಳ್ಳೋದೇ ಒಳ್ಳೆಯ ಹೆಂಡ್ತಿ ಲಕ್ಷಣ' ಎಂದ ಗೆಳತಿಗೆ, 'ಹಾಗಾದ್ರೆ ನಂಗೆ ಗಂಡ ಬೇಡ. ನಿನ್ನಂಥ ಒಳ್ಳೆ ಹೆಂಡ್ತಿ ಬೇಕು' ಎಂದು ಹೇಳಿ ಕಣ್ಣು ಮಿಟುಕಿಸುವಷ್ಟು ಚಾಲಾಕಿ ಈ ನಿಧಿ.

'ಕನಸು ಕಾಣೋಕ್ ಕಣ್ಣು ಬೇಕಾ? ಊಟ ಮಾಡೋಕೆ? ಸೆಕ್ಸ್ ಮಾಡೋಕೆ? ಮಾತಾಡೋಕೆ? ಪ್ರೀತಿ ಮಾಡೋಕೆ? ಇಲ್ವಲ್ಲ ... ಹಾಗಾದ್ರೆ ಕಾಮಿಡಿ ಮಾಡೋಕೂ ಕಣ್ಣು ಬೇಡ. ನನ್ನ ನೋಡಿ, ದೊಡ್ಡ ಸೆಲೆಬ್ರಿಟಿಗಿಂಥ ಜಾಸ್ತಿ ಗಮನ ಸೆಳೀತೀನಿ. ಹೋದಲ್ಲಿ ಬಂದಲ್ಲಿ ಜನ ನನ್ನನ್ನು ಗುರ್ತಿಸುತ್ತಾರೆ. ಅಂಗವಿಕಲತೆ ಸ್ಟಾರ್‌ಡಂ ತಂದ್ಕೊಟ್ಟಿದೆ, ಜೊತೆಗೆ ಸುತ್ತಲಿನವರ ಗುಸುಪಿಸು ಮಾತುಗಳನ್ನೂ' ಎಂಬ ನಿಧಿ ಮಾತು ಕೇಳುವಾಗ ತುಟಿಯಂಚಲ್ಲಿ ನಗುವೂ ಕಣ್ಣಂಚಲ್ಲಿ ನೀರೂ ಒಟ್ಟೊಟ್ಟಿಗೇ ಒಸರುತ್ತದೆ.

**youtu.be/bNdVlwFptfU**
**youtu.be/pAiWqJs3MSU**

